೧೧ ಮಾರ್ಚ್ ೨೦೧೪

<u>ಸಂಸದರು ಹಾಗೂ ಶಾಸಕರು ಎದುರಿಸುತ್ತಿರುವ ಮೊಕದ್ದಮೆಗಳನ್ನು ಚುರುಕುಗೊಳಿಸಬೇಕು</u>

–ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

"ಸಾರ್ವಜನಿಕ ಹಿತಾಸಕ್ತಿ ಮುದುವಟ್ಟು" ಎಂಬ ಸರ್ಕಾರೇತರ ಸೇವಾ ಸಂಸ್ಥೆಯು ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿರುವ ಮೊಕದ್ದಮೆಯ ಮಧ್ಯಂತರ ಆದೇಶ ನಿನ್ನೆ ಹೊರ ಬಂದಿದ್ದು, ಅದರಂತೆ, ಸಂಸದರು ಹಾಗೂ ಶಾಸಕರು ಎದುರಿಸುತ್ತಿರುವ ಭ್ರಷ್ಟಾಚಾರ ಪ್ರಕರಣಗಳು ಹಾಗೂ ಅನ್ಯ ಗಂಭೀರ ಅಪರಾಧಗಳು ಎರಡು ವರ್ಷಗಳು ಹಾಗೂ ಅದಕ್ಕೂ ಹೆಚ್ಚಿನ ಶಿಕ್ಷೆಯನ್ನು ಆಕರ್ಷಿಸಿದರೆ, ಪ್ರತಿನಿತ್ಯ ಅವುಗಳ ವಿಚಾರಣೆ ನಡೆಸಿ ಪ್ರಕ್ರಿಯೆ ಚುರುಕುಗೊಳಿಸಲಾಗುವುದು ಹಾಗೂ ಆರೋಪ ಪಟ್ಟಿ ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಅದನ್ನು ಪೂರ್ಣಗೊಳಿಸಲಾಗುವುದು. ಒಂದು ವರ್ಷಗಳ ಒಳಗೆ ಮೊಕದ್ದಮೆ ಪೂರ್ಣಗೊಳಿಸುವಲ್ಲಿ ವಿಫಲರಾದ ನ್ಯಾಯಾಧೀಶರು ವಿಳಂಬಕ್ಕೆ ಸೂಕ್ತ ಕಾರಣವನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ನೀಡಬೇಕು ಎಂದೂ ಸಹ ನ್ಯಾಯಾಲಯ ಸೂಚಿಸಿದೆ.

ರಾಜಕೀಯ ಅಪರಾಧೀಕರಣವು ಭಾರತೀಯ ಪ್ರಜಾಸತ್ತೆ ಎದುರಿಸುತ್ತಿರುವ ಗಂಭೀರ ವಿಚಾರವಾಗಿದೆ. ಅಪರಾಧ ಹಿನ್ನಲೆಯ ಮತ್ತು ಆರೋಪ ಪಟ್ಟಿ ಸಲ್ಲಿಕೆ ಆಗಬೇಕಾದ ವ್ಯಕ್ತಿಗಳನ್ನು ರಾಜಕೀಯ ಪಕ್ಷಗಳು ಚುನಾವಣಾ ಕಣಕ್ಕೆ ಇಳಿಸುತ್ತಿರುವುದು ಒಂದು ವ್ಯಾಧಿಯಾಗಿ ಬೆಳೆದಿದೆ. ರಾಜಕೀಯ ಗುಣಮಟ್ಟ ಹಾಗೂ ಶಾಸಕಾಂಗ ಸಭೆಗೆ ಆಯ್ಕೆಯಾಗುವ ವ್ಯಕ್ತಿಗಳ ಹಿನ್ನಲೆ ಕುರಿತು ದೇಶದ ಜನರ ಮನಸ್ಸಿನಲ್ಲಿ ಜಿಗುಪ್ಸೆವುಂಟಾಗಿದೆ. ಚುನಾವಣಾ ಆಯೋಗ ಹಾಗೂ ಕಾನೂನು ಆಯೋಗಗಳು ಇದಕ್ಕೆ ಸುಲಭ ಪರಿಹಾರವನ್ನು ಸೂಚಿಸಿವೆ. ಯಾವುದೇ ವ್ಯಕ್ತಿಯ ವಿರುದ್ಧ ಆರೋಪ ಪಟ್ಟಿ ಯಾವುದೇ ಅಪರಾಧಕ್ಕಾಗಿ ಸಲ್ಲಿಸಿದ್ದಲ್ಲಿ ಅವರನ್ನು ಚುನಾವಣೆಯಿಂದ ಅನರ್ಹಗೊಳಿಸಬೇಕು ಎಂಬುದು ಅವರ ವಾದವಾಗಿದೆ. ಶಿಕ್ಷೆಗೆ ಗುರಿಯಾದ ವ್ಯಕ್ತಿಗಳು ಚುನಾವಣೆಗೆ ನಿಲ್ಲಬಾರದು ಎಂಬ ನಿರ್ಬಂಧವನ್ನು ಸಂವಿಧಾನ ಹಾಗೂ ಪ್ರಜಾ ಪ್ರತಿನಿಧಿತ್ವ ಕಾಯಿದೆ ಹೇರಿದರು, ಆರೋಪಪಟ್ಟಿ ಸಲ್ಲಿಸಲಾದ ರಾಜಕಾರಣಿಯ ನಿಷೇಧಕ್ಕೆ ಯಾವುದೇ ಕಾನೂನುಗಳಿಲ್ಲ. ಇದರಿಂದ ನ್ಯಾಯಿಕ ಆವಶ್ಯಕತೆ ಹಾಗೂ ಸಾರ್ವಜನಿಕ ಅಭಿಪ್ರಾಯದ ನಡುವೆ ಅಂತರ ಏರ್ಪಡುತ್ತದೆ.

ಈ ವಿಚಾರವನ್ನು ರಾಜಕೀಯ ಪಕ್ಷಗಳು ಹಲವಾರು ಬಾರಿ ಚರ್ಚಿಸಿದರೂ ಇತ್ಯರ್ಥವಾಗದೆ ಉಳಿದ ಈ ಸಮಸ್ಯೆಗೆ ಪರಿಹಾರ ಹುಡುಕಲು ಸಾಧ್ಯವಾಗಿಲ್ಲ. ಓರ್ವ ವ್ಯಕ್ತಿಯ ವಿರುದ್ಧ ಆರೋಪ ಸಾಬೀತಾಗುವವರೆಗೂ ಅವನನ್ನು ಅಪರಾಧಿ ಎಂದು ಕರೆಯುವಂತಿಲ್ಲ ಎಂಬ ಕಾನೂನಿನ ರಕ್ಷಣೆಯನ್ನು ರಾಜಕೀಯ ಪಕ್ಷಗಳು ಪಡೆಯುತ್ತವೆ. ಹೀಗಾಗಿ ಆರೋಪ ಪಟ್ಟಿ ಹೊಂದಿದ ವ್ಯಕ್ತಿಯನ್ನು ಅಪರಾಧಿಯೆಂದು ಕರೆಯುವಂತಿಲ್ಲ. ಕಾನೂನು ಸುವ್ಯವಸ್ಥೆ ರಾಜ್ಯ ವಿಷಯವಾಗಿದ್ದ, ಹಲವಾರು ರಾಜ್ಯಗಳಲ್ಲಿ ದ್ವೇಶದ ರಾಜಕಾರಣದ ಮಿತಿಮೀರಿರುವುದರಿಂದ, ರಾಜಕೀಯ ವಿರೋಧಿಯ ವಿರುದ್ಧ ಹುಸಿ ಪ್ರಕರಣಗಳನ್ನು ದಾಖಲಿಸುವುದು ಕಷ್ಟವೆನಿಸದು ಎಂದೂ ಸಹ ರಾಜಕೀಯ ಪಕ್ಷಗಳು ವಾದಿಸುತ್ತವೆ. ಆರೋಪ ಹೊರಿಸುವಾಗ ಲಭ್ಯವಾಗುವ ದಾಖಲಾತಿಗಳನ್ನು

ನ್ಯಾಯಾಲಯಗಳು ಪರಿಶೀಲಿಸುತ್ತವೆ. ಅನರ್ಹಗೊಳಿಸಲು ಆರೋಪಪಟ್ಟಿಯೊಂದೆ ಸಾಕು ಎಂದಾಗ ಪ್ರಕ್ರಿಯೆಯ ಉಲ್ಲಂಘನೆಯಾಗುತ್ತದೆ.

ಎನ್‌ಡಿಎ ಸರ್ಕಾರದ ಅವಧಿಯಲ್ಲಿ ನಾವು ಮಧ್ಯದ ಮಾರ್ಗವನ್ನು ಅನುಸರಿಸಿದ್ದೆವು. ಕೆಲವು ಘೋರ ಅಪರಾಧಗಳ ಪಟ್ಟಿಯನ್ನು ಸಿದ್ಧಪಡಿಸಿ ಮಸೂದೆಯೊಂದನ್ನು ರೂಪಿಸಲಾಗಿತ್ತು. ಎರಡು ಪ್ರಕರಣಗಳಲ್ಲಿ ಹೇಯ ಕೃತ್ಯಗಳನ್ನು ಮಾಡಿದ ವ್ಯಕ್ತಿಯನ್ನು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ತಡೆಯುವ ನಿಯಮ ಈ ಮಸೂದೆಯಲ್ಲಿತ್ತು. ಎನ್‌ಡಿಎ ಬೆಂಬಲಿಸಿದ ಈ ಮಸೂದೆಯನ್ನು ಅನ್ಯ ರಾಜಕೀಯ ಪಕ್ಷಗಳು ತಿರಸ್ಕರಿಸಿದ್ದವು.

ಹೀಗಾದರೆ ಇದಕ್ಕೆ ಪರಿಹಾರವೇನು? ವ್ಯವಸ್ಥೆ ಮೂಕ ಸಾಕ್ಷಿಯಾಗಿ ನಿಲ್ಲಬಹುದೇ? ಸರ್ವೋಚ್ಚ ನ್ಯಾಯಾಲಯವು ಒಂದು ಪರಿಹಾರ ಹುಡುಕಲು ಯತ್ನಿಸಿದೆ. ಅಪರಾಧ ಸಾಬೀತಾಗುವವರೆಗೂ ವ್ಯಕ್ತಿ ನಿರಪರಾಧಿ ಎಂಬ ತತ್ವವನ್ನು ಈ ಪರಿಹಾರವು ಗೌರವಿಸುತ್ತದೆ. ಕುಚೋದ್ಯದ ಆರೋಪ ಪಟ್ಟಿಯಿಂದ ರಕ್ಷಣೆಯನ್ನೂ ಅದು ನೀಡುತ್ತದೆ. ಕೇವಲ ಆರೋಪ ಪಟ್ಟಿ ಸಲ್ಲಿಸಿದ ಮಾತ್ರಕ್ಕೆ ಓರ್ವ ವ್ಯಕ್ತಿಯನ್ನು ಇದು ನಿರ್ಬಂಧಿಸುವುದಿಲ್ಲ. ಇದೇ ಸಮಯದಲ್ಲಿ ಯಾವುದೇ ರಾಜಕಾರಣಿ, ಸಂಸದ ಅಥವಾ ಶಾಸಕ ವಿಚಾರಣೆ ಮುಂದೂಡುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಆತ ಸಾರ್ವಜನಿಕ ಸೇವೆಯಲ್ಲಿರುವ ಕಾರಣ ಸೀಜರ್ ಹೆಂಡತಿಯಂತೆ ಸಂದೇಹಗಳನ್ನು ಮೀರಿ ನಿಲ್ಲುವ ಕ್ಷಮತೆ ಅವರಲ್ಲಿರಬೇಕು. ಅವರ ವಿರುದ್ಧದ ವಿಚಾರಣೆಗಳು ದಿನನಿತ್ಯ ತ್ವರಿತಗತಿಯಲ್ಲಿ ನಡೆಯಬೇಕು. ಸಾಧ್ಯವಾದಷ್ಟು ಅವರ ವಿರುದ್ಧದ ವಿಚಾರಣೆ ಒಂದು ವರ್ಷದಲ್ಲಿ ಪೂರ್ಣಗೊಳ್ಳಬೇಕು.

ಆರೋಪ ಸಾಬೀತಾಗುವವರೆಗೂ ಓರ್ವ ವ್ಯಕ್ತಿ ಅಮಾಯಕನೆಂದೇ ಪರಿಗಣಿಸುವ ಸಿದ್ಧಾಂತವನ್ನು ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ಆದರೆ ಜೊತೆಗೆ, ಚುನಾಯಿತ ಪ್ರತಿನಿಧಿಯು ತೀಕ್ಷ್ಣ ವಿಚಾರಣೆಗೆ ಒಳಪಡುವಂತೆ, ಚುರುಕಾದ ವಿಚಾರಣೆ ಎದುರಿಸುವಂತೆ ಪ್ರತಿಪಾದಿಸುತ್ತದೆ. ಈ ಆದೇಶವನ್ನು ನಾನು ಸ್ವಾಗತಿಸುತ್ತೇನೆ. ಇದು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡ ನಿರ್ಣಯವಾಗಿದೆ.